ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಆರೋಗ್ಯ ಸಚಿವೆಯವರು ಹಳೆಯ ವಾಹನಗಳನ್ನು ವಿಲೇವಾರಿ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಕಳೆದ ಆರು ವರ್ಷಗಳಲ್ಲಿ ಇಲ್ಲವೇ ಕಳೆದ ಎರಡು ವರ್ಷಗಳಲ್ಲಿ ಎಷ್ಟು ವಾಹನಗಳನ್ನು ವಿಲೇವಾರಿ ಮಾಡಿದ್ದಾರೆಂದು ದಯವಿಟ್ಟು ಸಭೆಗೆ ತಿಳಿಸುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ಕೇಳುತ್ತೇನೆ ?

ಶ್ರೀಮತಿ ಮನೋರಮಾ ಮಧ್ವರಾಜ್. ಆ ಮಾಹಿತಿ ನನ್ನಲ್ಲಿ ಸಧ್ಯಕ್ಕೆ ಇಲ್ಲ ನಾನು ತರಿಸಿಕೊಡುತ್ತೇನೆ

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾನು ಈ ಪ್ರಶ್ನೆಯನ್ನು ಏತಕ್ಕೆ ಕೇಳಿದ್ದೇನೆಂದರೆ ತಾವು ಈ ಇಲಾಖೆಯ ಹೊಣೆಗಾರಿಕೆಯನ್ನು ಹೊತ್ತು ಆರು ತಿಂಗಳಾಗಿದೆ. ತಾವು ಈ ಬಗ್ಗೆ ದೊಡ್ಡ ತಪ್ಪು ಮಾಡಿದ್ದೀರಿ ಎಂದು ಹೇಳುವುದಕ್ಕೆ ನಾನು ಬಯಸುವುದಿಲ್ಲ. ರಾಜ್ಯದ ೨೦ ಜಿಲ್ಲೆಗಳಲ್ಲಿರತಕ್ಕ ಜಿಲ್ಲಾ ಆರೋಗ್ಯ ಅಧಿಕಾರಿಗಳು ತಮ್ಮ ಕಚೇರಿಗಳ ಮುಂದೆ ೧೫–೨೦ ವರ್ಷಗಳಿಂದ ಕಂಡೆಮ್ನ್ ಆಗಿರತಕ್ಕ ವಾಹನಗಳನ್ನು ನಿಲ್ಲಿಸಿದ್ದಾರೆ. ಜಿಲ್ಲಾ ಆರೋಗ್ಯ ಅಧಿಕಾರಿಗಳನ್ನು ಏತಕ್ಕೆ ೨೫–೩೦ ವರ್ಷಗಳಿಂದ ವಾಹನಗಳನ್ನು ನಿಲ್ಲಿಸಿಕೊಂಡಿದ್ದೀರಿ ಅಂದರೆ ಆರ್ ಟಿ.ಓ. ಅವರು ವಾಹನ ಕಂಡಮ್ನ್ ಆಗಿದೆಯೆಂದು ಸರ್ಟಿಫಿಕೇಟ್ ಮಾಡಬೇಕು. ಆಮೇಲೆ ನಾವು ಅವುಗಳನ್ನು ವಿಲೇವಾರಿ ಮಾಡಬೇಕೆಂದು ಹೇಳುತ್ತಾರೆ. ಈ ವಾಹನಗಳು ಕೇಂದ್ರ ಸರ್ಕಾರದ ಬೇರೆ ಬೇರೆ ಸ್ಕೀಮ್‌ಗಳಿಂದ ಬಂದಿವೆ. ನಾನು ಆರೋಗ್ಯ ಸಚಿವನಾಗಿದ್ದಾಗ ಇವುಗಳನ್ನು ಹರಾಜು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೆ, ನಾನು ೧೬ ತಿಂಗಳುಗಳ ಕಾಲ ಮಾತ್ರ ಆರೋಗ್ಯ ಮಂತ್ರಿಯಾಗಿ ಕೆಲಸ ಮಾಡಿದೆ. ಆ ಸಮಯದಲ್ಲಿ ಮಾಡುವುದಕ್ಕೆ ಆಗಲಿಲ್ಲ. ಈಗಲಾದರೂ ತಾವು ೧೦ ವರ್ಷ ಅಥವಾ ೨೦ ವರ್ಷಗಳಲ್ಲಿ ಎಲ್ಲ ಕಂಡೆಮ್ನ್ ಆಗಿರತಕ್ಕ ವಾಹನಗಳನ್ನು ವಿಲೇವಾರಿ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ತಿಳಿಸುತ್ತೀರಾ ? ಎರಡನೆಯೆದಾಗಿ, ಮಾಗಡಿ ರಸ್ತೆಯಲ್ಲಿರುವ ವರ್ಕ್‌ಶಾಪ್‌ನಲ್ಲಿ ಕೆಲಸ ಆಗುತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಜಿಲ್ಲಾ ಪರಿಷತ್‌ನವರ ವ್ಯಾಪ್ತಿಗೆ ಎಲ್ಲ ವಾಹನಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದರ ಅಗತ್ಯ ಇದೆಯೇ ಅಥವಾ ಇಲ್ಲವೋ ಎಂಬುದನ್ನು ತಾವು ತಿಳಿಸಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್.—ಕಂಡೆಮ್ನ್ ಆಗಿರತಕ್ಕ ವಾಹನಗಳನ್ನು ಒಂದು ವರ್ಷ ಅಥವಾ ೬ ತಿಂಗಳಲ್ಲಿ ಡಿಸ್‌ಪೋಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಾಗಡಿ ರಸ್ತೆಯಲ್ಲಿರುವ ಕೇಂದ್ರೀಯ ಕಾರ್ಯಾಗಾರದ ರಾಜ್ಯ ಆರೋಗ್ಯ ಸಂಸ್ಥೆಯಲ್ಲಿ ಬೆಂಗಳೂರು ಗ್ರಾಮಾಂತರ ಮತ್ತು ನಗರ ಜಿಲ್ಲೆ ಬಿಟ್ಟು ಉಳಿದ ಎಲ್ಲ ವಾಹನಗಳನ್ನು ಅಲ್ಲಿ ರಿಪೇರಿ ಮಾಡಿಸಲಾಗುತ್ತಿದೆ. ಅದರ ಅಗತ್ಯತೆ ಉಂಟು.

ಶ್ರೀಮಂತಿ ದಮಯಂತಿ ಬೋರೇಗೌಡ.—ಎಲ್ಲ ವಾಹನಗಳನ್ನು ನಿಲ್ಲಿಸುವುದಕ್ಕೆ ಸರಿಯಾದ ಶೆಲ್ಟರ್ ಇಲ್ಲದೇ ಇರುವುದರಿಂದ ಅವು ಜಾಗ್ರತೆ ದುರಸ್ತಿಗೆ ಬರುತ್ತವೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀಮತಿ ಮನೋರಮಾ ಮಧ್ವರಾಜ್.—ಎಲ್ಲ ವಾಹನಗಳಿಗೆ ಶೆಲ್ಟರ್ ಒದಗಿಸುವುದಕ್ಕೆ ಸಾಧ್ಯವಿಲ್ಲ. ಜಿಲ್ಲಾ ಪರಿಷತ್‌ನವರು ಹೆಚ್ಚು ವಾಹನಗಳನ್ನು ಇಟ್ಟುಕೊಂಡಿರುತ್ತಾರೆ. ಅವರು ಈ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡು ಸರ್ಕಾರಕ್ಕೆ ತಿಳಿಸಿದರೆ ನಾವು ಏನಾದರೂ ಒಂದು ವ್ಯವಸ್ಥೆ ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್.—ತಾವು ಆರೋಗ್ಯ ಸಚಿವರಾದ ಮೇಲೆ ಇಲಾಖೆಯ ವಾಹನಗಳಿಗೆ ಅನಾರೋಗ್ಯ ಬಂದಿದೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

(ಉತ್ತರವಿಲ್ಲ)

ಆರೋಗ್ಯ ಇಲಾಖೆಯವರಿಂದ ವಿಡಿಯೋ ಎಂಡೋ ಸೋಪ್ಸ್ ಉಪಕರಣಗಳ ಖರೀದಿ

೬೫. ಶ್ರೀ ರಾಮಲಿಂಗ ರೆಡ್ಡಿ (ಜಯನಗರ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಆರೋಗ್ಯ ಇಲಾಖೆಯಲ್ಲಿ ವೀಡಿಯೋ ಎಂ ಡೋಸ್ಕೋಪ್ ಉಪಕರಣಗಳನ್ನು ಖರೀದಿಸುವಲ್ಲಿ ದುರುಪಯೋಗ ಆಗಿದೆಯೆಂದು ಆಪಾದಿಸಲಾಗಿದೆ. ಈ ವಿಷಯದ ಬಗ್ಗೆ ತನಿಖೆ ನಡೆಸಲು ಯಾವುದಾದರೂ ಸಮಿತಿಯನ್ನು ರಚಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಸದರಿ ಸಮಿತಿಯ ವರದಿಯನ್ನು ಯಾವ ದಿನಾಂಕದಂದು ಸಲ್ಲಿಸಲಾಗುವುದು?

ಶ್ರೀಮತಿ ಮನೋರಮಾ ಮಧ್ವರಾಜ್(ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು).—

ಆ) ಹೌದು. ವಿಧಾನ ಪರಿಷತ್ತು ಸದನದ ಸಮಿತಿಯೊಂದನ್ನು ರಚಿಸಿದೆ.

ಆ) ಸಮಿತಿಯು ಈಗಾಗಲೇ ಒಂದು ಭಾರಿ ಸಭೆ ಸೇರಿ ಕೆಲವೊಂದಂ ಮಾಹಿತಿಯನ್ನು ಆಡಳಿತ ಇಲಾಖೆಯಿಂದ ಕೇಳಿದೆ. ಸದರಿ ಮಾಹಿತಿಯನ್ನು ಸಲ್ಲಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ರಾಮಲಿಂಗರೆಡ್ಡಿ.—ಮಾನ್ಯ ಉಪಾಧ್ಯಕ್ಷಣಿಯವರೆ, ನನ್ನ ಪ್ರಶ್ನೆಗೆ ಉತ್ತರ ಬಂದಿದೆ. ಸದನದ ಸಮಿತಿಯನ್ನು ನೇಮಿಸಿದ್ದು ಯಾವಾಗ? ಆ ಸಮಿತಿ ಯಾವಾಗ ರಿಪೋರ್ಟ್ ಕೊಡುತ್ತದೆ? ನಡೆದಿರುವ ಅವ್ಯವಹಾರದ ಬಗ್ಗೆ ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ? ಈ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಬಯಸುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಮೇಲ್ಮನೆಯ ಸದಸ್ಯರಿರುವ ಸದನದ ಸಮಿತಿಯನ್ನು ರಚಿಸಿದ್ದಾರೆ. ಆ ಸಮಿತಿಯವರು ಈಗಾಗಲೇ ಸಭೆ ಸೇರಿ ಆಸ್ಪತ್ರೆಗಳಿಗೆ ಭೇಟಿ ಕೊಟ್ಟಿದ್ದಾರೆ. ಈಗಲೇ ತಮ್ಮ ವರದಿ ಕೊಡಿಯೆಂದು ಅವರಿಗೆ ಕೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ ಅದು ಸದನದ ಸಮಿತಿ.

ಶ್ರೀ ರಾಮಲಿಂಗರೆಡ್ಡಿ.—೮೭ ಲಕ್ಷ ರೂಪಾಯಿ ಖರ್ಚುಮಾಡಿ ಈ ಎಕ್ವಿಪ್‌ಮೆಂಟ್ಸ್ ತರಿಸಿದ ಮೇಲೆ ಅವುಗಳನ್ನು ಯಾವುದೇ ರೀತಿಯಲ್ಲಿ ಉಪಯೋಗಿಸುತ್ತಿಲ್ಲ. ಅವುಗಳನ್ನು ಆಸ್ಪತ್ರೆಗಳಿಗೆ ನೀಡಿಲ್ಲ. ಆದಷ್ಟು ಬೇಗ ಈ ಎಕ್ವಿಪ್‌ಮೆಂಟ್ಸನ್ನು ಆಸ್ಪತ್ರೆಗಳಿಗೆ ತಲುಪಿಸಬೇಕು, ಅವುಗಳನ್ನು ಇಡಲು ಏರ್‌ಕಂಡೀಶನ್ ವ್ಯವಸ್ಥೆ ಬೇಕು, ತಜ್ಞರು ಬೇಕು. ಈ ಕೆಲಸವೆಲ್ಲಾ ಆಗುತ್ತಿಲ್ಲ. ಇದು ಆದಷ್ಟು ಬೇಗ ಆಗಬೇಕು ಮತ್ತು ಜನತೆಗೆ ಇದರ ಉಪಯೋಗ ಆಗಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಆರೋಗ್ಯ ಸಚಿವೆಯವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಸದಸ್ಯರು 'ಯಾವುದಾದರೂ ಸಮಿತಿಯನ್ನು ರಚಿಸಿರುವುದು ಹೌದೆ?' ಎಂದು ಕೇಳಿರುವ ಪ್ರಶ್ನೆಗೆ ಸಮಿತಿಯು ಕಾರ್ಯನಿರತವಾಗಿದೆ ಎಂದು ಉತ್ತರ ಕೊಟ್ಟಿದ್ದೇನೆ. ಸದರಿ ಸಮಿತಿ ವರದಿ ಸಲ್ಲಿಸಿದ ಕೂಡಲೇ ಯಾವ ದಾಕ್ಷಿಣ್ಯವೂ ಇಲ್ಲದೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತೇನೆ.

ನಾಗಮಂಗಲ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ತೊಂದರೆ

೩೧. **ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) —**ಮಾನ್ಯ ಗ್ರಾಮಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ?

ಆ) ಮಾಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸಮಸ್ಯೆಯ ಪರಿಹಾರಕ್ಕಾಗಿ ಸರ್ಕಾರವು ಜಿಲ್ಲಾ ಪರಿಷತ್ ಮೂಲಕ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಮಂತ್ರಿಗಳು) —

ಅ) ಬಂದಿದೆ.

ಆ) ಸಮಸ್ಯೆಯ ಪರಿಹಾರಕ್ಕಾಗಿ ಈಗಿರುವ ವ್ಯವಸ್ಥೆಗೆ ಪೂರಕವಾಗಿ ೧೯೯೦–೯೧ನೇ ಸಾಲಿನಲ್ಲಿ ೪ ನಳದ ನೀರು ಸರಬರಾಜು ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಇದೇ ರೀತಿ ೧೯೯೦–೯೧ನೇ ಕ್ರಿಯಾ ಯೋಜನೆಯಡಿಯಲ್ಲಿ ಹೆಚ್ಚಿಗೆ ಕೆಲವು ಕಿರು ನೀರು ಸರಬರಾಜು ಯೋಜನೆಗಳನ್ನು ಹಾಗೂ ಕೊಳವೆ ಬಾವಿಗಳನ್ನು ಕೊರೆದು ಕೈ ಪಂಪು ಜೋಡಿಸುವ ಪ್ರಸ್ತಾಪವಿದೆ.

ಕುಡಿಯುವ ನೀರಿನ ಅಭಾವ ತೀವ್ರತೆ ಕಂಡು ಬಂದಲ್ಲೆಲ್ಲಾ ಸಾಕಷ್ಟು ನೀರನ್ನು ಒದಗಿಸಲು ಹೆಚ್ಚಿನ ಕೊಳವೆ ಬಾವಿಗಳನ್ನು ತೆಗೆದಾಗಲಿ ಅಥವಾ ತುರ್ತು ಪರಿಸ್ಥಿತಿಯಲ್ಲಿ ನೀರನ್ನು ಬೇರೆ ಕಡೆಯಿಂದ ಸಾಗಿಸತಕ್ಕ ವ್ಯವಸ್ಥೆ ಮಾಡಲಾಗುವುದು.